# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1026 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು |
| ಉತ್ತರಿಸುವ ದಿನಾಂಕ | : | 23-02-2024. |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಕೇಂದ್ರ ಪರಿಹಾರ ಕೇಂದ್ರ, ಸುಮ್ಮನಹಳ್ಳಿಯಲ್ಲಿ ಇದು ಒಟ್ಟು ಎಷ್ಟು ಎಕರೆ ಪ್ರದೇಶವನ್ನು ಹೊಂದಿದೆ; ಹಾಗೂ ಈ ಜಾಗದಲ್ಲಿ ನಡೆಯುತ್ತಿರುವ ಚಟುವಟಿಕೆಗಳೇನು;</td><td>ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಪರಿಹಾರ ಸಮಿತಿ ಅಧೀನದಲ್ಲಿ ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. ಇದರ ವ್ಯಾಪ್ತಿಯಲ್ಲಿ ಒಟ್ಟು 308.03 ಎಕರೆ ಜಮೀನು ಇದ್ದು, ಅದರಲ್ಲಿ ವಿವಿಧ ಇಲಾಖೆ/ ಸಂಸ್ಥೆಗಳಿಗೆ ವರ್ಗಾವಣೆ ಮಾಡಿದ ಜಮೀನು 85.07 ಎಕರೆ ಮತ್ತು ವಿವಿಧ ಇಲಾಖೆ/ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾದ ಜಮೀನು 58.07 ಎಕರೆಗಳು ಹಾಗೂ ಪ್ರಸ್ತುತ ಉಳಿಕೆ 165.19 ಎಕರೆ ಜಮೀನು ನಿರಾಶ್ರಿತರ ಪರಿಹಾರ ಕೇಂದ್ರದ ಅಧೀನದಲ್ಲಿರುತ್ತದೆ. ಸದರಿ ಜಮೀನಿನಲ್ಲಿ ಕರ್ನಾಟಕ ಭಿಕ್ಷಾಟನಾ ಅಧಿನಿಯಮ ಹಾಗೂ ನಿಯಮ 1975 ರಡಿ ನಿರಾಶ್ರಿತರಿಗೆ ರಕ್ಷಣೆ ಒದಗಿಸಿ ವೃತ್ತಿಪರ ತರಬೇತಿಗಳಾದ ಕೃಷಿ ಮತ್ತು ತೋಟಗಾರಿಕೆ, ಹೈನುಗಾರಿಕೆ, ಕುರಿ ಮೇಕೆ ಸಾಕಾಣಿಕೆ, ಕಾಯರ್ ಮ್ಯಾಟ್, ಗೃಹೋಪಯೋಗಿ ಉತ್ಪನ್ನಗಳು, ಸಿದ್ಧ ಉಡುಪು, ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ಬೈಂಡಿಂಗ್ ತಯಾರಿಸುವಂತಹ ತರಬೇತಿ ಹಾಗೂ ಇನ್ನಿತರೆ ವೃತ್ತಿಪರ ತರಬೇತಿಗಳನ್ನು ನೀಡುವ ಮೂಲಕ ಪುನ: ಭಿಕ್ಷಾಟನೆಗೆ ಹೋಗದಂತೆ ಮನಪರಿವರ್ತನೆ ಮಾಡಿ ಸ್ವಾಲಂಬಿಗಳನ್ನಾಗಿ ಮಾಡಲಾಗುತ್ತಿದೆ.</td></tr>
<tr><td>ಆ)</td><td>ಇರುವಂತ ಜಾಗದಲ್ಲಿ ಯಾವುದಾದರೂ ಸಂಘ ಸಂಸ್ಥೆ ಅಥವಾ ಎನ್‌ಜಿಒ ಗಳಿಗೆ ಇಂತಿಷ್ಟು ಅವಧಿಗೆಂದು ಜಮೀನನ್ನು ಗುತ್ತಿಗೆಗೆ ನೀಡಲಾಗಿದೆಯೇ; ನೀಡಿದ್ದಲ್ಲಿ, ಇದರ ಒಟ್ಟು ವಿಸ್ತೀರ್ಣವೆಷ್ಟು; ಹಾಗೂ ಸಂಸ್ಥೆಯ ಪೂರ್ಣ ವಿವರ ಹಾಗೂ ಸರ್ಕಾರ ನಿಗದಿಪಡಿಸಿರುವ ಹಣವೆಷ್ಟು;</td><td rowspan="2">
<table>
<tr><th>ಸಂಘ ಸಂಸ್ಥೆ</th><th>ಗುತ್ತಿಗೆ ನೀಡಲಾದ ಜಮೀನಿನ ವಿಸ್ತೀರ್ಣ (ಎಕರೆ/ ಗುಂಟೆಗಳಲ್ಲಿ)</th><th>ವಾರ್ಷಿಕ ಎಕರೆಗೆ ನಿಗದಿ ಪಡಿಸಿರುವ ಹಣ</th></tr>
<tr><td>ಸುಮನಹಳ್ಳಿ ಕುಷ್ಠರೋಗಿಗಳ ಪುನರ್‌ವಸತಿ ಕೇಂದ್ರ,</td><td>43.19</td><td>ವಾರ್ಷಿಕ ಎಕರೆ ಒಂದಕ್ಕೆ ರೂ.1000/-ದಂತೆ ದಿನಾಂಕ: 01-01-2018 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ನಾಡ ಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ</td><td>5.00</td><td>ವಾರ್ಷಿಕ ಎಕರೆ ಒಂದಕ್ಕೆ ರೂ.1000/-ದಂತೆ ದಿನಾಂಕ: 01-01-2018 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ</td><td>4.18</td><td>ದಿನಾಂಕ: 15-02-1986 ರಿಂದ 99 ವರ್ಷ ಲೀಸ್ ಆಧಾರದ ಮೇಲೆ ನೀಡಲಾಗಿದೆ.</td></tr>
<tr><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ</td><td>4.00</td><td>ವಾರ್ಷಿಕ ಎಕರೆ ಒಂದಕ್ಕೆ ರೂ.10,000/- ಗಳಂತೆ ದಿನಾಂಕ: 16-08-2005 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ಬೆಂಗಳೂರು ಮಹಾನಗರ ಪಾಲಿಕೆ (ವಿದ್ಯುತ್ ಚಿತಾಗಾರ ನಿರ್ಮಿಸಲು)</td><td>2.00</td><td>ವಾರ್ಷಿಕ ಎಕರೆ ಒಂದಕ್ಕೆ ರೂ.100/- ಗಳಂತೆ ದಿನಾಂಕ: 16-08-2005 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
</table>
</td></tr>
<tr><td>ಇ)</td><td>ಗುತ್ತಿಗೆ ಪಡೆದುಕೊಂಡ ಸಂಸ್ಥೆಯವರು ಎಷ್ಟು ವಿಸ್ತೀರ್ಣ ಪ್ರದೇಶದಲ್ಲಿ ತಮ್ಮ ಕಾರ್ಯಚಟುವಟಿಕೆ ನಡೆಸುತ್ತಿದ್ದಾರೆ; ಅವುಗಳು ಯಾವುವು; ಉಳಿದಂತ ಜಾಗದಲ್ಲಿ ನಡೆಯುತ್ತಿರುವ ಚಟುವಟಿಕೆಗಳೇನು;</td></tr>
</table>

| | | |
|---|---|---|
| | | ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿರುವ ಜಾಗವನ್ನು ಆಯ ಸಂಸ್ಥೆಯವರು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಿದ್ದು, ತಮ್ಮ ತಮ್ಮ ಸಂಸ್ಥೆಗೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ನಡೆಸುತ್ತಿರುತ್ತಾರೆ. |
| ಈ) | ಜಮೀನನ್ನು ಗುತ್ತಿಗೆ ನೀಡುವಂತಹ ಸಂದರ್ಭದಲ್ಲಿ ಸರ್ಕಾರ ವಿಧಿಸಿರುವ ನೀತಿ ನಿಯಮಗಳೇನು; ನಿಯಮ ಇದ್ದರೂ ಸಹ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನ ಹಾಗೂ ಆದೇಶಗಳಂತೆ ನೀತಿನಿಯಮಗಳನ್ನು ರೂಪಿಸಿ ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. ಗುತ್ತಿಗೆ ನೀಡುವ ಸಂದರ್ಭದಲ್ಲಿ ಜಮೀನಿನಲ್ಲಿ ಹೊಸದಾಗಿ ಕಟ್ಟಡಗಳನ್ನು ನಿರ್ಮಿಸಬಾರದು, ಹಳೆಕಟ್ಟಡಗಳಿಗೆ ಹಾನಿಯುಂಟು ಮಾಡಬಾರದು ಹಾಗೂ ಸರ್ಕಾರವು ನಿಗಧಿಪಡಿಸಿದ ಗುತ್ತಿಗೆ ಮೊತ್ತವನ್ನು ಕಾಲಕಾಲಕ್ಕೆ ಪಾವತಿಸುವ ನೀತಿ ನಿಯಮಗಳನ್ನು ರೂಪಿಸಿ ಜಮೀನನ್ನು ಗುತ್ತಿಗೆಗೆ ನೀಡಲಾಗಿರುತ್ತದೆ. |
| ಉ) | ಬಂದಿದ್ದಲ್ಲಿ, ಈ ಸಂಸ್ಥೆಯ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; ಇದನ್ನು ಗಮನಿಸಬೇಕಾಗಿರುವ ಅಧಿಕಾರಿಗಳು ಯಾರು, ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದಾದರೂ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆಯೇ; | ಇವುಗಳ ಪೈಕಿ ಸುಮನಹಳ್ಳಿ ಕುಷ್ಟರೋಗಿಗಳ ಪುನರ್ ವಸತಿ ಕೇಂದ್ರವನ್ನು ಹೊರತು ಪಡಿಸಿ ಇತರೆ ಯಾವುದೇ ಸಂಸ್ಥೆಯವರು ನಿಯಮ ಉಲ್ಲಂಘನೆಯನ್ನು ಮಾಡಿರುವುದಿಲ್ಲ.<br><br>ಸುಮನಹಳ್ಳಿ ಕುಷ್ಟರೋಗಿಗಳ ಪುನರ್ ವಸತಿ ಕೇಂದ್ರಕ್ಕೆ ನೀಡಲಾದ ಗುತ್ತಿಗೆ ಜಮೀನನ್ನು ಬಿ.ಬಿ.ಎಂ.ಪಿ.ಯವರು ಅತಿಕ್ರಮಣ ಮಾಡಿ ಶಾಲೆ, ಆಸ್ಪತ್ರೆ, ತ್ಯಾಜ್ಯ ಘಟಕ ಹಾಗೂ ಇತರೆ ಕಟ್ಟಡಗಳನ್ನು ನಿರ್ಮಿಸಿರುತ್ತಾರೆ. ಈ ಬಗ್ಗೆ ಸುಮನಹಳ್ಳಿ ಕುಷ್ಟರೋಗಿಗಳ ಪುನರ್ ವಸತಿ ಕೇಂದ್ರವು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ.<br><br>ಅಧೀಕ್ಷಕರು, ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರ, ಇವರು ಕೇಂದ್ರ ಪರಿಹಾರ ಸಮಿತಿಗೆ ಜಮೀನು ಅತಿಕ್ರಮಣ ಬಗ್ಗೆ ಕಾಲಕಾಲಕ್ಕೆ ನೋಟಿಸ್ ಜಾರಿ ಮಾಡಿದ್ದು ಸದರಿ ಕಟ್ಟಡಗಳನ್ನು ನಿರ್ಮಾಣ ಮಾಡದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ಇರುತ್ತದೆ. |
| ಊ) | ಸರ್ಕಾರದ ಜಮೀನನ್ನು ಸರ್ಕಾರದ ಕಾರ್ಯಚಟುವಟಿಕೆಗಳಿಗೆ ಬಳಸಿಕೊಳ್ಳುವುದಕ್ಕೆ ಉಪಯೋಗಿಸಿಕೊಳ್ಳುವುದನ್ನು ಬಿಟ್ಟು, ಈ ರೀತಿ ಗುತ್ತಿಗೆ ನೀಡುವ ಅನಿವಾರ್ಯ ಇದೆಯೇ; ಇದರ ಉದ್ದೇಶಗಳೇನು? | ಸರ್ಕಾರದ ಅನುಮೋದನೆಯೊಂದಿಗೆ ಮೇಲ್ಕಂಡಂತೆ ಗುತ್ತಿಗೆ ನೀಡಲಾಗಿರುತ್ತದೆ. |

**No: SWD/6/SBR/2024**

**(ಡಾ||ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.